198

ಮೈಸೂರ ಗೆಜೆಟ್.

ವಿಶೇಷ ಪತ್ರಿಕೆ.

ಸರ್ಕಾರದಿಂದ ಪ್ರಾಯಿಷ್ಕರಿಸಿದ್ದು.

ಮೈಸೂರು, 18ನೇ ಅಕ್ಟೋಬರ್ 1907.

ಶ್ರೀಮನ್ ಮಹಾರಾಜರಾಜಾಸಾಹೇಬ್ ಬಹದ್ದೂರ್‌ರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆ.

ನಂಬರ್ C. 57 ತಾರೀಖು 18ನೆ ಅಕ್ಟೋಬರ್ 1907 ಮೊಕ್ಕಾಂ ಮೈಸೂರು.

1907ನೆ ಇಸವಿ ಅಕ್ಟೋಬರ್ ತಾರೀಖು 18ರಲ್ಲು ನವರಾತ್ರಿ ಮಹೋತ್ಸವ ಪ್ರಯುಕ್ತವಾದ ದರ್ಬಾರಿನಲ್ಲಿ ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದ್ದೂರ್‌ರವರು ಬಿರುದುಗಳನ್ನು ದಯಪಾಲಿಸಿ ಅಪ್ಪಣೆ ಕೊಟ್ಟ ಇದರಕೆಳಗೆ ಬರುವ ಪ್ರಸಿದ್ಧಪತ್ರಿಕೆಯನ್ನು ಸರ್ವರ ತಿಳುವಳಿಕೆಬಗ್ಗೆ ಪ್ರಕಟಪಡಿಸಿದುತ್ತೆ.

ಹುಕುಂ ಬಮೋಜೀಬ್,
C. S. BALASUNDARAM IYER,
ಆಫೀಷಿಯೇಟಿಂಗ್ ಸೆಕ್ರಟರಿ, ಮೈಸೂರು ಗವರ್ನಮೆಂಟ್, ಜನರಲ್ ಮತ್ತು ರವಿನ್ಯೂ ಇಲಾಖೆ.

ಪ್ರಸಿದ್ಧಪತ್ರಿಕೆ.

ಶ್ರೀಃ

ಶ್ರೀಮತ್ಸಮಸ್ತ ಭೂಮಂಡಲ ಮಂಡನಾಯಮಾನ ನಿಖಿಳ ದೇಶಾವತಂಸ ಕರ್ಣಾಟಕ ಜನಪದ ಸಂಪದಧಿಷ್ಠಾನಭೂತ ಶ್ರೀಮನ್ಮಹೀಕೂರ ಮಹಾಸಂಸ್ಥಾನ ಮಧ್ಯ ದೇದೀಪ್ಯಮಾನ ನಿಖಿಳ ಕಳಾನಿಧಿ ಕುಲಕ್ರಮಾಗತ ರಾಜ ಕ್ಷಿತಿಪಾಲ ಪ್ರಮುಖ ನಿಖಿಳ ರಾಜಾಧಿರಾಜ ಮಹಾರಾಜ ಚಕ್ರವರ್ತಿ ಮಂಡಲಾನುಭೂತ ದಿವ್ಯರತ್ನ ಸಿಂಹಾಸನಾರೂಢ ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಪ್ರೌಢ ಪ್ರತಾಪ ಅಪ್ರತಿಮವೀರ ನರಪತಿ ಬಿರುದೆಂತೆಂಬರಗಂಡ ಲೋಕೈಕವೀರ ಯದುಕುಲಪಯಃಪಾರಾವಾರ ಕಳಾನಿಧಿ ಶಂಖಚಕ್ರಾಂಕುಶ ಕುಠಾರ ಮಕರ ಮತ್ಸ್ಯ ಶರಭ ಸಾಳ್ವ ಗಂಡಭೇರುಂಡ ಧರಣೀವರಾಹ ಹನೂಮದ್ಗರುಡ ಕಂಠೀರವಾದ್ಯನೇಕ ಬಿರುದಾಂಕಿತರಾದ ಕರ್ಣಾಟಕ ಸಿಂಹಾಸನಾಧೀಶ್ವರ

ಶ್ರೀಮತ್ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್, ಜಿ. ಸಿ. ಎಸ್. ಐ. ಯವರು

ಶಾಲೀವಾಹನ ಶಕ ೧೮೩೯ನೆ ಪ್ಲವಂಗ ಸಂವತ್ಸರದ ಆಶ್ವಯುಜ ಶುದ್ಧ ೧೦ ಶುಕ್ರವಾರದಲ್ಲು ನವರಾತ್ರಿ ಮಹೋತ್ಸವ ಪ್ರಯುಕ್ತವಾದ ದರ್ಬಾರಿನಲ್ಲಿ ನಮ್ಮ ಅನುಗ್ರಹಕ್ಕೆ ಪಾತ್ರರಾದ ಆಸೂರ್ ರಂಗಸ್ವಾಮಿ ಅಯ್ಯಂಗಾರ್ರಿಗೆ "ರಾಜಕಾರ್ಯ ಪ್ರವೀಣ" ಎಂಬ ಬಿರುದನ್ನೂ, ಜೋತಿನಗರದ ಯಜಮಾನ್ ದೊಡ್ಡಣ್ಣ ಶೆಟ್ರಿಗೆ "ಜನೋಪಕಾರಿ" ಎಂಬ ಬಿರುದನ್ನೂ ತಕ್ಕ ಮರ್ಯಾದೆಗಳೊಡನೆ ದಯಪಾಲಿಸಿರುತ್ತೇವೆ.

KRISHNARAJA WADIYAR.